ಸಲುವಾಗಿ ದಿನಾಂಕ: 25–10–2014 ರಂದು Global expression of Interest ಅನ್ನು ಅಹ್ವಾನಿಸಿದ್ದು, 5 ಸಮಾಲೋಚಕರಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿರುತ್ತದೆ.

ಪೂರ್ವಾರ್ಹತೆಗೊಳ್ಳುವ ಸಮಾಲೋಚಕರಿಂದ ವಿವರವಾದ ಯೋಜನಾ ವರದಿಯನ್ನು ಪಡೆದ ನಂತರ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ) ಇರುವುದಿಲ್ಲ.

ತುಂಗಾ ಮೇಲ್ದಂಡೆ ಯೋಜನೆ

2015 (2193); ಶ್ರೀ ಬಣಕಾರ್ ಯು.ಬಿ (ಹಿರೇಕೆರೂರು)

ಅ) ತುಂಗಾ ಮೇಲ್ದಂಡೆ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗಿದೆ; ಅಂದಿನ ಅಂದಾಜು ವೆಚ್ಚ ಎಷ್ಟು;

ಆ) ಈ ಯೋಜನೆಗೆ 28/02/2014 ರ ವರೆಗೆ ಖರ್ಚಾದ ಮೊತ್ತ ಎಷ್ಟು; ಈಗಿನ ಅಂದಾಜು ವೆಚ್ಚ ಎಷ್ಟು;

ಇ) ತುಂಗಾ ಮೇಲ್ದಂಡೆ ಯೋಜನೆಯಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯಲಿದೆ; ಇದುವರೆಗೆ ಸಾಧಿಸಿರುವ ಪ್ರಗತಿ ಎಷ್ಟು? (ತಾಲ್ಲೂಕುವಾರು ಮತ್ತು ಕ್ಷೇತ್ರವಾರು ವಿವರ ನೀಡುವುದು)

ಶ್ರೀ ಎಂ.ಬಿ. ಪಾಟೀಲ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ತುಂಗಾ ಮೇಲ್ದಂಡೆ ಯೋಜನೆಯನ್ನು 1991–92ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದ್ದು, ಮೂಲ ಅಂದಾಜು ವೆಚ್ಚವು ₹ 271.41 ಕೋಟಿಗಳಾಗಿರುತ್ತದೆ.

ಆ) ತುಂಗಾ ಮೇಲ್ದಂಡೆ ಯೋಜನೆಗೆ ಫೆಬ್ರವರಿ 2014ರವರೆಗೆ ₹ 1904.04 ಕೋಟಿ ವೆಚ್ಚವಾಗಿರುತ್ತದೆ. ಪರಿಷ್ಕೃತ ಅಂದಾಜು ಮೊತ್ತವು ₹ 2561.88 ಕೋಟಿಗಳಾಗಿರುತ್ತದೆ.

ಇ) ತುಂಗಾ ಮೇಲ್ದಂಡೆ ಯೋಜನೆಯಿಂದ ಒಟ್ಟು 80494 ಹೆಕ್ಟೇರ್ (198820 ಎಕರೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯಲಿದ್ದು, ಫೆಬ್ರವರಿ 2015ರ ಅಂತ್ಯದವರೆಗೆ ಸಾಧಿಸಿರುವ ತಾಲ್ಲೂಕುವಾರು/ಕ್ಷೇತ್ರವಾರು ಪ್ರಗತಿಯ ವಿವರ ಕೆಳಗಿನಂತಿದೆ:

ಕ್ರ. ಸಂ.	ತಾಲ್ಲೂಕು/ಕ್ಷೇತ್ರ	ಸಾಧಿಸಬೇಕಾದ ಒಟ್ಟು ಪ್ರಗತಿ (ಹೆಕ್ಟೇರ್‌ಗಳಲ್ಲಿ)	ಇದುವರೆಗೆ ಸಾಧಿಸಿರುವ ಪ್ರಗತಿ (ಹೆಕ್ಟರ್‌ಗಳಲ್ಲಿ)
1	ಶಿವಮೊಗ್ಗ	686	686
2	ಹೊನ್ನಾಳಿ	5976	5796
3	ಹರಿಹರ	593	593
4	ಹಿರೇಕೆರೂರು	9468	8517
5	ರಾಣೇಬೆನ್ನೂರು	33705	25409
6	ಹಾವೇರಿ	27908	17642
7	ಹಾನಗಲ್	2158	–
ಒಟ್ಟು:		**80,494**	**58,643**